**ದಿನಾಂಕಃ 21-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಆರೋಪಿಯ ಪರ ಶ್ರೀ. ಎ. ಕೆ, ವಕೀಲರಿಂದಃ-**

01. ಸಂಜೆ 4.30 ರಿಂದ 4.45 ಗಂಟೆ ಸಮಯದಲ್ಲಿ ನನ್ನ ಹೆಂಡತಿಯ ಚಿಕ್ಕಪ್ಪನವರ ಅಂತ್ಯ ಕ್ರಿಯೆ ಆಗಿರುತ್ತದೆ. ದಿ.24-06-2018 ರಂದು ಸಂಜೆ ಮಳೆ ಬರುತ್ತಿರಲಿಲ್ಲ. ಸಂಜೆ 5 ಗಂಟೆ ಸಮಯದಲ್ಲಿ ನಾವು ಹಾಗಲಹಳ್ಳಿ ಗ್ರಾಮವನ್ನು ಬಿಟ್ಟೆವು. ಹಾಗಲಹಳ್ಳಿ ಗ್ರಾಮದಿಂದ ಅಪಘಾತ ನಡೆದ ಸ್ಥಳಕ್ಕೆ ಸುಮಾರು 4 ಕಿ. ಮೀ. ನಷ್ಟು ಅಂತರವಿದೆ. ಹಾಗಲಹಳ್ಳಿ ಗ್ರಾಮದಿಂದ ಅಪಘಾತ ನಡೆದ ಸ್ಥಳಕ್ಕೆ ಹೋಗಲು ಸುಮಾರು 25 ನಿಮಿಷ ಬೇಕು. ಮಂಜನಬೆಲೆ ಡ್ಯಾಮಿನ ಹತ್ತಿರ ರಸ್ತೆಯು ತಿರುವಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ರಸ್ತೆಯು ತಿರುವಿನಿಂದ ಕೂಡಿರುವ ಕಾರಣದಿಂದ ಎಲ್ಲಾ ವಾಹನಗಳು ನಿಧಾನವಾಗಿ ಹೋಗುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಪಘಾತ ನಡೆದ ಸಮಯದಲ್ಲಿ ನಾನು ಮತ್ತು ಹೆಂಡತಿ ಹೆಲ್ಮೆಟ್ ನ್ನು ಧರಿಸಿದ್ದೇವು. ದಿ.24-06-2018 ರಂದು ಸಂಜೆ ಸಮಯದಲ್ಲಿ ಅಪಘಾತ ನಡೆದ ಸ್ಥಳದಲ್ಲಿ ಮಳೆ ಬರುತ್ತಿತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಮಳೆ ಬರುತ್ತಿದ್ದ ಕಾರಣ ನಿಮ್ಮ ವಾಹನವು ಆಯಾ ತಪ್ಪಿ ನಿಮಗೆ ಅಪಘಾತವು ಸಂಭವಿಸಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

02. ನೀವು ಪೋ. ಇಲಾಖೆಯಲ್ಲಿ ಕೆಲಸ ಮಾಡುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಪೋ. ಇಲಾಖೆಯಲ್ಲಿ ಕೆಲಸ ಮಾಡುವ ಕಾರಣದಿಂದ ನಿಮ್ಮ ತಪ್ಪಿ ನಿಂದ ಆಪ ಘಾತ ಆಗಿದ್ದರೂ ಸಹ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಆರೋಪಿಯ ತಪ್ಪಿ ನಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಯ ವಾಹನವು ಮಾರುತಿ ಸುಜಕಿಯ ಆಸ್ಟರ್ ಕಾರು ಆಗಿರುತ್ತದೆ ಮತ್ತು ಅದರ ಬಣ್ಣ ಬೂದು ಬಣ್ಣ ಆಗಿದೆ. ಆ ದಿನದಂದು ಆರೋಪಿಯ ಕಾರು ಅಪಘಾತ ನಡೆದ ಸ್ಥಳದ ಬಳಿ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅಪಘಾತ ಆಗಿ ನಾವು ಕೆಳಗೆ ಬಿದ್ದಿದ್ದಾಗ ನಮ್ಮ ಹಿಂದೆ ಬಂದ ಕಾರಿನಲ್ಲಿ ಇದ್ದ ವ್ಯಕ್ತಿಗಳು ನಮ್ಮ

ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಿದರು. ಅವರು ನನ್ನ ಹೆಂಡತಿಯ ಸಂಬಂಧಿಕರು ಆಗಿದ್ದರು. ಅವರ ಹೆಸರು ಪ್ರಕಾಶ್ ಆಗಿದೆ ಮತ್ತು ಅವರ ಜೊತೆಯಲ್ಲಿ ಇನ್ನೂ ಕೆಲವರು ಇದ್ದರು. ಅವರು ಹೆಸರು ನನಗೆ ಗೊತ್ತಿಲ್ಲ.

03. ಅಪಘಾತವು ಮಂಜನಬೆಲೆ ಡ್ಯಾಮ್ ನಿಂದ ಎಡಗಡೆಗೆ ತಿರುಗುವಾಗ ಇರುವ ಜಾಗದಲ್ಲಿ ಸಂಭವಿಸಿರುತ್ತದೆ. ದಿ.25-06-2018 ರಂದು ಪೋಲೀಸರು ಅಪೋಲೋ ಆಸ್ಪತ್ರೆಗೆ ಬಂದಾಗ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನೀವು ಪೋಲೀಸರಿಗೆ ನಿಮ್ಮ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಅಪಘಾತ ಪಡಿಸಿದ ವಾಹನದ ಚಾಲಕರನ್ನು ನೋಡಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿದ್ದಾರೆ. ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಮತ್ತು ನಿಮ್ಮ ತಪ್ಪಿನಿಂದಲೇ ಸಂಭವಿಸಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ**

**ಮಾಗಡಿ**

**ದಿನಾಂಕಃ 21-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಆರೋಪಿಯ ಪರ ಶ್ರೀ. ವಿ. ಕೆ, ವಕೀಲರಿಂದಃ-**

01. ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ನನ್ನ ಮಾವನವರ ಅಂತ್ಯ ಕ್ರಿಯೆ ಆಗಿರುತ್ತದೆ. ನಾನು ಹಾಗಲಹಳ್ಳಿ ಗ್ರಾಮದವನು. ನನ್ನ ಮಾವನ ಅಂತ್ಯ ಕ್ರಿಯನ್ನು ಮುಗಿಸಿ ನನ್ನ ಮನೆಯಲ್ಲಿಯೇ ಇದ್ದೇನು, ಆದರೆ ಸಂಜೆ 5 ಗಂಟೆ ಸಮಯದಲ್ಲಿ ಚಾಸಾ-2ರವರನ್ನು ಬಿಡಲು ನಾನು ಚಂದ್ರಪ್ಪ ಸರ್ಕಲ್ ಗೆ ಹೋದೆನು. ನಾನು ನನ್ನ ಚಿಕ್ಕಪ್ಪನಾದ ಚಾಸಾ-5ರವರು ಚಾಸಾ-2ರವರ ಹಿಂದೆ ಪ್ರತ್ಯೇಕ ಬೈಕ್ ನಲ್ಲಿ ಹೋಗುತ್ತಿದ್ದೇವು. ಸದರಿ ದ್ವಿಚಕ್ರ ವಾಹನವನ್ನು ನಾನು ಚಾಲನೆ ಮಾಡುತ್ತಿದ್ದೇನು. ಚಾಸಾ-2ರವರು ಚಾಲನೆ ಮಾಡುತ್ತಿದ್ದ ವಾಹನವು ಡಿಸ್ಕವರ್ ವಾಹನ ಆಗಿದೆ ಮತ್ತು ಅದರ ಬಣ್ಣ ಕಪ್ಪು ಮ ತ್ತು ಕೆಂಪು ಆಗಿರುತ್ತದೆ. ಚಾಸಾ-2 ಮತ್ತು 3 ಮೃತ ವ್ಯಕ್ತಿಯು ಹೆಲ್ಮೆಟ್ ನ್ನು ಧರಿಸಿದ್ದರು. ದಿ.24-06-2018 ರಂದು ಸಂಜೆ ಸಮಯದಲ್ಲಿ ಮಳೆ ಬರುತ್ತಿತ್ತು.

02. ಮಂಜನಬೆಲೆ ಡ್ಯಾಮಿನ ಹತ್ತಿರ ರಸ್ತೆಯು ತಿರುವಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ರಸ್ತೆಯು ತಿರುವಿನಿಂದ ಕೂಡಿರುವ ಕಾರಣದಿಂದ ಮುಂದೆ ಬರುವ ವಾಹನಗಳು ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ . ಚಾಸಾ-2ರವರ ವಾಹನ ಆಯಾ ತಪ್ಪಿದ್ದರಿಂದ ಚಾಸಾ-2 ಮತ್ತು ಅವರ ಹೆಂಡತಿಗೆ ಗಾಯ ಆಗಿರುತ್ತದೆ ಎಂದರೆ ಸಾಕ್ಷಿಯು ಅವರ ವಾಹನವು ಆಯ ತಪ್ಪಿ ರುವುದಿಲ್ಲ ಮತ್ತು ಕಾರು ಬಂದು ಡಿಕ್ಕಿ ಪಡಿಸಿದ್ದರಿಂದ ಸದರಿ ಅಪಘಾತವು ಸಂಭವಿಸಿದೆ ಎನ್ನುತ್ತಾರೆ. ಅಪಘಾತ ನಡೆದ ಸಮಯದಲ್ಲಿ ತುಂತುರ ಮಳೆ ಬರುತ್ತಿತ್ತು. ಚಾಸಾ-2ರವರ ತಪ್ಪಿ ನಿಂದ ಆಪಘಾತ ಆಗಿದ್ದರೂ ಸಹ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಆರೋಪಿಯ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅಪಘಾತ ನಡೆದ ಸ್ಥಳವು ತಿರುವಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ಅಷ್ಟಾಗಿ ತಿರುವು ಇರುವುದಿಲ್ಲ ಎನ್ನುತ್ತಾರೆ. ಮಳೆ ಬರುತ್ತಿದ್ದ ಕಾರಣ ರಸ್ತೆಯು ತಿರುವಿನಿಂದ ಇದ್ದ ಕಾರಣ ಎಲ್ಲಾ ವಾಹನಗವು ನಿಧಾನವಾಗಿ ಬರುತ್ತಿತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಮತ್ತು ಚಾಸಾ-1ರವರು ಚಾಸಾ-2 ಮತ್ತು ಅವರ ಹೆಂಡತಿಯನ್ನು ಆಸ್ಪತ್ರೆಗೆ

ದಾಖಲಿಸಿದೆನು. ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ ಮತ್ತು ಚಾಸಾ-1ರವರು ಮಾತ್ರ ಚಾಸಾ-2 ಮತ್ತು ಅವರ ಹೆಂಡತಿಯನ್ನು ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ಸಮಯದಲ್ಲಿ ನಾನು ಅಪಘಾತ ನಡೆದ ಸ್ಥ,ಳದಲ್ಲಿಯೇ ಇದ್ದೇನು. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ನಾನು ದೂರನ್ನು ನೀಡಿರುತ್ತೇನೆ. ಯಾವುದೇ ಅಪಘಾತವು ನಡೆಯದೇ ಇದ್ದರೂ ಸಹ ಚಾಸಾ-2ರವರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

03. ಚಾಸಾ-2ರವರು ಪೋಲೀಸ್ ಇಲಾಖೆಯಲ್ಲಿ ಕೆಲಸವನ್ನು ಮಾಡುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಸದರಿ ಅಪಘಾತಕ್ಕೆ ಸಂಬಂಧಿಸಿಂತೆ ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅಪಘಾತ ಪಡಿಸಿದ ಕಾರಿನ ಬಣ್ಣವು ಬೂದು ಬಣ್ಣವಾಗಿದೆ. ಸದರಿ ಕಾರಿನ ಹೆಸರು ನನಗೆ ಗೊತ್ತಿಲ್ಲ. ನೀವು ಅಪಘಾತ ನಡೆದ ಸ್ಥಳದಲ್ಲಿ ಇಲ್ಲದೇ ಇದ್ದ ಕಾರಣ ನೀವು ಸದರಿ ವಿಷಯದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಯ ತಪ್ಪಿ ನಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಮತ್ತು ಚಾಸಾ-2ರವರ ತಪ್ಪಿ ನಿಂದಲೇ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ**

**ಮಾಗಡಿ**